# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1056
ಮಾನ್ಯ ಸದಸ್ಯರ ಹೆಸರು : ಶ್ರೀ ಛಲವಾದಿ ಟಿ.ನಾರಾಯಸ್ವಾಮಿ
ಉತ್ತರಿಸುವ ದಿನಾಂಕ : 23-02-2024
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2023-24 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳ ಕಲ್ಯಾಣಕ್ಕಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ಮೀಸಲಾದ ಅನುದಾನದಲ್ಲಿ ಜನವರಿ 2024 ರ ಅಂತ್ಯಕ್ಕೆ ಎಷ್ಟು ಮೊತ್ತವನ್ನು ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಬಳಕೆ ಮಾಡಲಾಗಿದೆ; ಸಂಪೂರ್ಣ ಮಾಹಿತಿ ನೀಡುವುದು;</td><td>
2023-24 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣಕ್ಕಾಗಿ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಯೋಜನೆಯಡಿ ಮೀಸಲಾದ ಅನುದಾನದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ದಿನಾಂಕ:12.02.2024 ರವರೆಗೆ ವೆಚ್ಚ ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ.<br>
(ರೂ. ಕೋಟಿಗಳಲ್ಲಿ)
<table>
<tr><th rowspan="2">ಯೋಜನೆ</th><th colspan="3">ಹಂಚಿಕೆ</th><th colspan="3">ವೆಚ್ಚ</th></tr>
<tr><th>SCSP</th><th>TSP</th><th>Total</th><th>SCSP</th><th>TSP</th><th>Total</th></tr>
<tr><td>ಗೃಹಲಕ್ಷ್ಮಿ</td><td>3,500.00</td><td>1,575.00</td><td>5,075.00</td><td>2,214.88</td><td>941.43</td><td>3,156.31</td></tr>
<tr><td>ಅನ್ನಭಾಗ್ಯ</td><td>1,955.65</td><td>823.85</td><td>2,779.50</td><td>594.06</td><td>259.26</td><td>853.32</td></tr>
<tr><td>ಗೃಹಜ್ಯೋತಿ</td><td>1,650.00</td><td>760.00</td><td>2,410.00</td><td>998.44</td><td>465.90</td><td>1,464.34</td></tr>
<tr><td>ಶಕ್ತಿ</td><td>560.00</td><td>252.00</td><td>812.00</td><td>473.36</td><td>213.02</td><td>686.38</td></tr>
<tr><td>ಯುವನಿಧಿ</td><td>47.50</td><td>20.00</td><td>67.50</td><td>1.17</td><td>0.50</td><td>1.67</td></tr>
<tr><td>ಒಟ್ಟು</td><td>7,713.15</td><td>3,430.85</td><td>11,144.0</td><td>4,281.91</td><td>1880.11</td><td>6,162.02</td></tr>
</table>
</td></tr>
<tr><td>ಆ)</td><td>ಪ್ರತಿಯೊಂದು ಗ್ಯಾರಂಟಿ ಯೋಜನೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಸಂಖ್ಯೆ ಎಷ್ಟು; ಪ್ರತಿಯೊಂದು ಗ್ಯಾರಂಟಿ ಯೋಜನೆಗಳಿಗನುಸಾರವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯ ಹಣದಲ್ಲಿ ಮೀಸಲಿಟ್ಟ ಅನುದಾನದ ವಿವರ ನೀಡುವುದು ಹಾಗೂ ಜನವರಿ 2024ರ ಅಂತ್ಯದವರೆಗೆ ಎಷ್ಟು ಮೊತ್ತವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ವೆಚ್ಚ ಮಾಡಲಾಗಿದೆ; ಪ್ರತಿಯೊಂದು ಗ್ಯಾರಂಟಿ ಯೋಜನೆಯ ಅನುಸಾರ ಮಾಹಿತಿ ನೀಡುವುದು;</td><td>
ಗ್ಯಾರಂಟಿ ಯೋಜನೆಯಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳ ಸಂಖ್ಯೆಯ ವಿವರ ಈ ಕೆಳಕಂಡಂತಿದೆ.
<table>
<tr><th rowspan="2">ಯೋಜನೆ</th><th colspan="2">ಫಲಾನುಭವಿಗಳ ಸಂಖ್ಯೆಗಳ ವಿವರ</th></tr>
<tr><th>ಪರಿಶಿಷ್ಟ ಜಾತಿ</th><th>ಪರಿಶಿಷ್ಟ ಪಂಗಡ</th></tr>
<tr><td>ಗೃಹಲಕ್ಷ್ಮಿ</td><td>21,74,519</td><td>8,62,846</td></tr>
<tr><td>ಅನ್ನಭಾಗ್ಯ</td><td>59,15,002</td><td>25,90,678</td></tr>
<tr><td>ಯುವನಿಧಿ</td><td>21,986</td><td>9,220</td></tr>
<tr><td>ಗೃಹಜ್ಯೋತಿ</td><td>8,57,324</td><td>3,68,997</td></tr>
<tr><td>ಶಕ್ತಿ</td><td colspan="2">ಸಾರಿಗೆ ಇಲಾಖೆಯಿಂದ ನೀಡಿರುವ ಮಾಹಿತಿಯಂತೆ ಇದುವರೆಗೆ 153.27 ಕೋಟಿ ಉಚಿತ ಟಿಕೆಟ್‌ನ್ನು ಮಹಿಳಾ ಪ್ರಯಾಣಿಕರಿಗೆ ನೀಡಿದ್ದು, ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಪ್ರಯಾಣಿಕರ ಮಾಹಿತಿ ಸಂಗ್ರಹಿಸುವುದು ಕಷ್ಟಕರವಾಗುತ್ತದೆ. ಆದರೆ, ಪರಿಶಿಷ್ಟ ಜಾತಿ ಮತ್ತು ಪಂಗಡದ ಮಹಿಳೆಯರು ಮತ್ತು ಶಾಲಾ ಕಾಲೇಜುಗಳ ವಿದ್ಯಾರ್ಥಿನಿಯರು ಸಹ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡುತ್ತಿದ್ದಾರೆ. ಸದರಿ ಯೋಜನೆಗೆ ಒಟ್ಟು ರೂ.2800.00 ಕೋಟಿ ಅನುದಾನ ಒದಗಿಸಿದ್ದು, ಅದರ ಪೈಕಿ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅನುದಾನ ರೂ.812.00 ಕೋಟಿ ಮಾತ್ರ ಆಗಿರುತ್ತದೆ.</td></tr>
</table>
</td></tr>
</table>

---2

| | | |
|---|---|---|
| ಇ) | ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗೆ ಬಳಕೆ ಮಾಡಿಕೊಂಡಿದ್ದಲ್ಲಿ ಒಂದು ವೇಳೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಮಾಹಿತಿ ಇಲ್ಲದಿದ್ದಲ್ಲಿ ಅವರು ಫಲಾನುಭವಿ ಆಗಿಲ್ಲದಿದ್ದರೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಂಡಂತೆ ಆಗುವುದಿಲ್ಲವೇ; ಇದು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾಯ್ದೆಯ ಉಲ್ಲಂಘನೆ ಯಾಗುವುದಿಲ್ಲವೇ; | ಮೇಲ್ಕಂಡಂತೆ ಎಸ್.ಸಿ/ಎಸ್.ಟಿ ಫಲಾನುಭವಿಗಳ ಮಾಹಿತಿ ಇದ್ದು, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಸದರಿ ಫಲಾನುಭವಿಗಳಿಗೆ ಮಾತ್ರ ಬಳಸಲಾಗುತ್ತಿದ್ದು, ಯಾವುದೇ ದುರ್ಬಳಕೆ ಆಗಿರುವುದಿಲ್ಲ. |
| ಈ) | ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಸರ್ಕಾರವು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಿರುವುದು ದಲಿತರಿಗೆ ಮಾಡಿದ ಅನ್ಯಾಯವಲ್ಲವೇ; ಆ ವರ್ಗಗಳ ಶ್ರೇಯೋಭಿವೃದ್ಧಿಗೆ ಬಳಕೆ ಮಾಡಬೇಕಾದ ಅನುದಾನಕ್ಕೆ ದಲಿತರ ಸಾಂವಿಧಾನಿಕ ಹಕ್ಕನ್ನು ಕಸಿದಂತಾಗುವುದಿಲ್ಲವೇ; ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಬಳಕೆ ಮಾಡಿರುವ ಹಣವನ್ನು ಮತ್ತೆ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಯೋಜನೆಯಲ್ಲಿ ವಿನಿಯೋಗ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ? | ಗ್ಯಾರಂಟಿ ಯೋಜನೆಗಳಿಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಅನುದಾನ ಒದಗಿಸಿದ್ದು, ಸದರಿ ಅನುದಾನವನ್ನು ಎಸ್.ಸಿ/ಎಸ್.ಟಿ ಫಲಾನುಭವಿಗಳ ಶ್ರೇಯೋಭಿವೃದ್ಧಿಗೆ ಬಳಕೆ ಮಾಡಲಾಗುತ್ತಿದೆ. ಆದ್ದರಿಂದ ಯಾವುದೇ ಅನ್ಯಾಯವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ. |

**ಸಕಇ 87 ಎಸ್ಎಲ್ಪಿ 2024**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**